ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಉನಿ : ಸುಮಪ : 2018–19 :** **ದಿನಾಂಕ : 22–10–2018**

# ಪತ್ರಿಕಾ ಆಮಂತ್ರಣ

1. ಕನ್ನಡ ಮತ್ತು ಸಂಸ್ಕೃತಿ ಇಲಾಖಾ ವತಿಯಿಂದ ಕಿತ್ತೂರು ರಾಣಿ ಚೆನ್ನಮ್ಮ ಜಯಂತ್ಯೋತ್ಸವ:

**ಉದ್ಘಾಟನೆ:**

ಡಾ. ಜಿ. ಪರಮೇಶ್ವರ್, ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.

**ಮುಖ್ಯ ಅತಿಥಿಗಳು:**

ಅನಂತಕುಮಾರ್, ಕೇಂದ್ರ ರಾಸಾಯನಿಕ ಹಾಗೂ ರಸಗೊಬ್ಬರ ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವರು.

ಡಾ. ಜಯಮಾಲ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರು.

ಶ್ರೀಮತಿ ಗಂಗಾಂಬಿಕೆ ಮಲ್ಲಿಕಾರ್ಜುನ, ಮಹಾಪೌರರು, ಬೃಹತ್ ಬೆಂಗಳೂರು ಮಹಾನಗರಪಾಲಿಕೆ.

**ಅಧ್ಯಕ್ಷತೆ:**

ಡಾ. ಉದಯ್ ಬಿ. ಗರುಡಾಚಾರ್, ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ.

ದಿನಾಂಕ: 23-10-2018, ಮಂಗಳವಾರ, ಸಮಯ: ಬೆಳಿಗ್ಗೆ 11–00 ಗಂಟೆಗೆ.

ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಂಗಳೂರು.

2. ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ನಿಮ್ಮ ಮನೆಗೆ ನಮ್ಮ ಪುಸ್ತಕ ಕಾರ್ಯಕ್ರಮ:

**ಅತಿಥೇಯರು:**

**ಶ್ರೀ ಸಿ.ಆರ್. ಚಂದ್ರಶೇಖರ್, ಖ್ಯಾತ ಮನೋವೈದ್ಯರು ಹಾಗೂ ವೈದ್ಯ ಸಾಹಿತಿಗಳು**

**ನಮ್ಮೊಂದಿಗೆ:**

ಶ್ರೀ ಸಿ. ದೊರೆಸ್ವಾಮಿ, ಆಪ್ತ ಸಲಹೆಗಾರರು

ಎ.ಎಸ್. ರಾಮಚಂದ್ರ, ನಿವೃತ್ತ ಅಧಿಕಾರಿ, ಬಿ.ಹೆಚ್.ಇ.ಎಲ್.

**ಪುಸ್ತಕಗಳೊಂದಿಗೆ:**

ಡಾ. ವಸುಂಧರಾ ಭೂಪತಿ, ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ

ದಿನಾಂಕ: 23–10–2018 ಮಂಗಳವಾರ, ಸಮಯ : ಬೆಳಿಗ್ಗೆ 11.00 ಗಂಟೆಗೆ

ಸ್ಥಳ: ಸಮಾಧಾನ, 324, ಅರಕೆರೆ ಮೈಕೋ ಲೇಔಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು.

**ಸಂಖ್ಯೆ:1177/1277**

## ಫಿಲಂ ಅಪ್ರೀಷಿಯೇಷನ್ ಕೋರ್ಸ್ ಗೆ ಅರ್ಜಿ ಆಹ್ವಾನ

ಬೆಂಗಳೂರು, ಅಕ್ಟೋಬರ್ 22(ಕರ್ನಾಟಕ ವಾರ್ತೆ)

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮತ್ತು ಕರ್ನಾಟಕ ಚಲನಚಿತ್ರ ಅಕಾಡೆಮಿ, ಬೆಂಗಳೂರು, ಇವರ ಸಹಯೋಗದಲ್ಲಿ ಪುಣೆಯ, ಭಾರತೀಯ ಫಿಲಂ ಮತ್ತು ಟೆಲಿವಿಷನ್ ಸಂಸ್ಥೆಯು (ಎಫ್‌ಟಿಐಐ), ಐದು ದಿನಗಳ ಅವಧಿಯ "ಫಿಲಂ ಅಪ್ರೀಷಿಯೇಷನ್ ಕೋರ್ಸ್"ಗೆ ಅರ್ಜಿಗಳನ್ನು ಆಹ್ವಾನಿಸಿದೆ.

ತರಬೇತಿಯು ನವೆಂಬರ್ 10 ರಿಂದ ನವೆಂಬರ್ 14ರವರೆಗೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ, ಸುಲೋಚನಾ ಚಿತ್ರಮಂದಿರದಲ್ಲಿ ಬೆಳಗ್ಗೆ 10 ಗಂಟೆಯಿಂದ ಸಂಜೆ 6.00 ಗಂಟೆವರೆಗೆ ನಡೆಯಲಿದೆ.

18 ವರ್ಷಕ್ಕೂ ಮೇಲ್ಪಟ್ಟ ಆಸಕ್ತ ಅಭ್ಯರ್ಥಿಗಳು ಅರ್ಜಿಗಳನ್ನು www.ftiindia.com ವೆಬ್‌ಸೈಟ್ ನಿಂದ ಡೌನ್ ಲೋಡ್ ಮಾಡಿಕೊಂಡು ವಿವರಗಳನ್ನು ತುಂಬಬಹುದಾಗಿದೆ, ತರಬೇತಿ ಶುಲ್ಕವಾಗಿ ರೂ.3,600/–ಗಳಿಗೆ ಡಿಮ್ಯಾಂಡ್ ಡ್ರ್ಯಾಫ್ಟ್‌ನ್ನು "ಅಕೌಂಟ್ಸ್ ಆಫೀಸರ್, ಭಾರತೀಯ ಫಿಲಂ &

ಟೆಲಿವಿಷನ್ ಸಂಸ್ಥೆ, ಪುಣೆ" (Accounts Officer, Film & Television Institute of India, Pune) ಇವರ ಹೆಸರಿನಲ್ಲಿ ಪಡೆದು, ಅರ್ಜಿಯೊಂದಿಗೆ "ರಿಜಿಸ್ಟ್ರಾರ್, ಕರ್ನಾಟಕ ಚಲನಚಿತ್ರ ಅಕಾಡೆಮಿ, ಅಮೃತ ಮಹೋತ್ಸವ ಭವನ, #20/ಎ, ಎಸ್.ಎಫ್.ಹೆಚ್.ಎಸ್ ಲೇಔಟ್, ನಂದಿನಿ ಲೇಔಟ್, ಬೆಂಗಳೂರು – 560096." (The Registrar, Karnataka Chalanachitra Academy, Amrutha Mahotsava Bhavana, #20/A, SFHS Layout, Nandini layout, Bangalore – 560096) ಇವರಿಗೆ ಸ್ಪೀಡ್ ಪೋಸ್ಟ್‌ನಲ್ಲಿ ಅಥವಾ ಖುದ್ದಾಗಿ ದಿನಾಂಕ: 31/10/2018ರ ಸಂಜೆ 5:00 ಗಂಟೆಯೊಳಗೆ ಸಲ್ಲಿಸಬಹುದಾಗಿದೆ.

ತಡವಾಗಿ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಆಯ್ಕೆಯಾದ ಅಭ್ಯರ್ಥಿಗಳ ತರಬೇತಿ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. (ಗರಿಷ್ಟ 100 ಅಭ್ಯರ್ಥಿಗಳಿಗೆ ಮಾತ್ರ ಪ್ರವೇಶ, ಕನಿಷ್ಟ 80 ಅಭ್ಯರ್ಥಿಗಳು ಬಾರದಿದ್ದಲ್ಲಿ ತರಬೇತಿಯನ್ನು ರದ್ದುಗೊಳಿಸಲಾಗುವುದು). ಹೆಚ್ಚಿನ ವಿವರಗಳನ್ನು www.ftiindia.com ವೆಬ್ ಸೈಟ್ ನಿಂದ ಪಡೆಯಬಹುದಾಗಿದೆ ಹಾಗೂ ದೂರವಾಣಿ ಸಂಖ್ಯೆ:080-23493410/41 ಅಥವಾ ಮೊ.ಸಂ: +919845924555 ನಿಂದ ಪಡೆಯಬಹುದಾಗಿದೆ.